ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 11–01–2016

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಎರಡನೇ ರಾಷ್ಟ್ರೀಯ ಅಣೆಕಟ್ಟು ಸುರಕ್ಷತೆ ಸಮ್ಮೇಳನ:<br><br>ಉದ್ಘಾಟನೆ:<br><br>ಎಂ. ಬಿ. ಪಾಟೀಲ್,<br>ಜಲಸಂಪನ್ಮೂಲ ಸಚಿವರು.<br><br>ಮುಖ್ಯ ಅತಿಥಿ:<br><br>ಘನಶ್ಯಾಮ್ ಝಾ,<br>ಅಧ್ಯಕ್ಷರು,<br>ಕೇಂದ್ರ ಜಲ ಆಯೋಗ | 12–1–2016<br>ಮಂಗಳವಾರ<br>ಬೆಳಗ್ಗೆ<br>9–30 ಗಂಟೆಗೆ | ಜೆ. ಎನ್. ಟಾಟಾ ಆಡಿಟೋರಿಯಂ,<br>ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್<br>ಬೆಂಗಳೂರು. |
| 2 | ದಿನಚರಿ ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭ:<br>ಉದ್ಘಾಟನೆ ಹಾಗೂ ದಿನಚರಿ ಬಿಡುಗಡೆ:<br><br>ವಿ. ಶ್ರೀನಿವಾಸ ಪ್ರಸಾದ್,<br>ಕಂದಾಯ ಸಚಿವರು,<br><br>ಮುಖ್ಯ ಅತಿಥಿಗಳು:<br><br>ಡಾ: ಬಿ. ಬಸವರಾಜು,<br>ಪ್ರಧಾನ ಕಾರ್ಯದರ್ಶಿ,<br>ಕಂದಾಯ ಇಲಾಖೆ | 12–1–2016<br>ಮಂಗಳವಾರ<br>ಬೆಳಗ್ಗೆ<br>11–00 ಗಂಟೆಗೆ | ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣ,<br>ಕಬ್ಬನ್‌ಪಾರ್ಕ್, ಬೆಂಗಳೂರು |

| | | | |
|---|---|---|---|
| | ಮುನೀಶ್ ಮೌದ್ಗಿಲ್<br>ಆಯುಕ್ತರು, ಭೂಮಾಪನ,<br>ಕಂದಾಯ ವ್ಯವಸ್ಥೆ ಮತ್ತು ಭೂ<br>ದಾಖಲೆಗಳ ಇಲಾಖೆ | | |
| 3 | ಕರ್ನಾಟಕ ರಾಜ್ಯ ಸಫಾಯಿ<br>ಕರ್ಮಚಾರಿ ಆಯೋಗದಿಂದ ಪ್ರಗತಿ<br>ಪರಿಶೀಲನೆಯ ನಂತರ ಪತ್ರಿಕಾ<br>ಗೋಷ್ಠಿ:<br>ಶ್ರೀ ನಾರಾಯಣ್,<br>ಅಧ್ಯಕ್ಷರು, ಕರ್ನಾಟಕ ರಾಜ್ಯ<br>ಸಫಾಯಿ ಕರ್ಮಚಾರಿ ಆಯೋಗ | 12-1-2016<br>ಮಂಗಳವಾರ<br>ಮಧ್ಯಾಹ್ನ<br>2-00  gಗಂಟೆಗೆ | ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ<br>ಆಯೋಗ,<br>4ನೇ ಮುಖ್ಯ ರಸ್ತೆ,<br>ಸಂಪಂಗಿರಾಮನಗರ,<br>ಬೆಂಗಳೂರು -560 027 |
| 4 | ರಾಜ್ಯಮಟ್ಟದ ಪ್ರೌಢಶಾಲಾ<br>ವಿದ್ಯಾರ್ಥಿಗಳಿಗೆ ಯುವ ಸಂಸತ್<br>ಸ್ಪರ್ಧೆಯ ಬಹುಮಾನ ವಿತರಣಾ<br>ಸಮಾರಂಭ<br><br>ಅಧ್ಯಕ್ಷತೆ:<br><br>ಟಿ. ಬಿ. ಜಯಚಂದ್ರ,<br>ಕಾನೂನು, ಸಂಸದೀಯ<br>ವ್ಯವಹಾರಗಳು ಮತ್ತು ಉನ್ನತ<br>ಶಿಕ್ಷಣ ಸಚಿವರು<br><br>ಉದ್ಘಾಟನೆ:<br><br>ಡಿ. ಹೆಚ್. ಶಂಕರಮೂರ್ತಿ<br>ಸಭಾಪತಿಗಳು,<br>ಕರ್ನಾಟಕ ವಿಧಾನ ಪರಿಷತ್ತು<br><br>ಮುಖ್ಯ ಅತಿಥಿಗಳು:<br><br>ಕಿಮ್ಮನೆ ರತ್ನಾಕರ,<br>ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ<br>ಖಾತೆ ಸಚಿವರು | 12-1-2016<br>ಮಂಗಳವಾರ<br>ಮಧ್ಯಾಹ್ನ<br>3-00 gಗಂಟೆಗೆ | ಚನ್ನಬಸಪ್ಪ ಸಭಾಂಗಣ,<br>ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್<br>ಕಬ್ಬನ್‌ಪಾರ್ಕ್, ಕೆ.ಆರ್. ವೃತ್ತ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಗಣ್ಯರು ಕಂಡಂತೆ ಸ್ವಾಮಿ ವಿವೇಕಾನಂದರು:

- ಸ್ವಾಮಿ ವಿವೇಕಾನಂದರು ನಮಗೆ ತಿಳಿದಿರುವ ಅಪಾರ ಶಕ್ತಿಯ ಏಕೈಕ ವ್ಯಕ್ತಿ ಪುರುಷರಲ್ಲಿ ಪುರುಷಸಿಂಹ. ಇಂದಿಗೂ ಅವರ ಅದಮ್ಯ ಕಾರ್ಯಶೀಲತೆ ಚಾಲನೆಯಲ್ಲಿರುವುದನ್ನು ಗುರುತಿಸಬಹುದು.
  – ಮಹರ್ಷಿ ಶ್ರೀ ಅರವಿಂದರು

- ಭಾರತವನ್ನು ಅರಿಯಬೇಕೆಂದಿದ್ದರೆ ಸ್ವಾಮಿ ವಿವೇಕಾನಂದರನ್ನು ಅಧ್ಯಯನ ಮಾಡಿ. ಅವರಲ್ಲಿ ಎಲ್ಲವೂ ರಚನಾತ್ಮಕವಾದುದು. ನೇತ್ಯಾತ್ಮಕವಾದದ್ದು ಯಾವುದೂ ಇಲ್ಲ .
  – ಕವಿ ರವೀಂದ್ರನಾಥ ಠಾಗೂರ್

- ಸ್ವಾಮಿ ವಿವೇಕಾನಂದರ ಕೃತಿಗಳನ್ನು ನಾನು ಆಮೂಲಾಗ್ರವಾಗಿ ಓದಿದ್ದೇನೆ. ಅವುಗಳ ಅಧ್ಯಯನದ ನಂತರ ಭಾರತದ ಬಗೆಗಿದ್ದ ನನ್ನ ಪ್ರೀತಿ ಸಾವಿರ ಪಾಲು ಹೆಚ್ಚಿತು.
  –ಮಹಾತ್ಮಾ ಗಾಂಧೀಜಿ

- ಗತಕಾಲದಲ್ಲಿ ನೆಲೆ ನಿಂತು ಭಾರತೀಯ ಪರಂಪರೆ ಬಗ್ಗೆ ಅತ್ಯಂತ ಹೆಮ್ಮೆ ಇದ್ದವರು ಸ್ವಾಮಿ ವಿವೇಕಾನಂದರು... ಅವರು ನಮ್ಮಲ್ಲಿ ನಮ್ಮ ಪರಂಪರೆಯ ಬಗ್ಗೆ ಸ್ವಾಭಿಮಾನವನ್ನು ಕೆರಳಿಸಿದರು.
  – ಪಂಡಿತ್ ಜವಾಹರಲಾಲ್ ನೆಹರು

- ಸ್ವಾಮಿ ವಿವೇಕಾನಂದರ ನುಡಿಗಳಿಂದ ನಮ್ಮ ದೇಶದ ಜನತೆ ಹಿಂದೆಂದೂ ಕಾಣದ ಆತ್ಮ ಗೌರವವನ್ನು, ಆತ್ಮ ವಿಶ್ವಾಸವನ್ನು ಹಾಗೂ ಆತ್ಮ ಬಲವನ್ನು ಪಡೆದಿದ್ದಾರೆ.
  –ನೇತಾಜಿ ಸುಭಾಷ್‌ಚಂದ್ರಬೋಸ್

- ಸ್ವಾಮಿ ವಿವೇಕಾನಂದರ ತಪಃ ಪೂರ್ಣವಾದ ಶಕ್ತಿವಾಣಿ ಒಂದು ಅಮೃತದ ಮಡು ! ಇದರಲ್ಲಿ ಮಿಂದರೆ ಪುನೀತರಾಗುತ್ತೇವೆ. ಇದು ಜ್ಯೋತಿಯ ಖನಿ. ಹೊಕ್ಕರೆ ಪ್ರಬುದ್ಧರಾಗುತ್ತೇವೆ.
  – ರಾಷ್ಟ್ರಕವಿ ಕುವೆಂಪು

ಬಾಬು/ಕೆಎಂ

# ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆ ಅಂಗವಾಗಿ ನಾಳೆಯಿಂದ

# ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳು

ಬೆಂಗಳೂರು, ಜನವರಿ 11, 2016 (ಕರ್ನಾಟಕ ವಾರ್ತೆ)

ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯ ಸರ್ಕಾರವು ಆದೇಶದಲ್ಲಿ ತಿಳಿಸಿರುವ ರಾಷ್ಟ್ರೀಯ ಯುವ ದಿನಾಚರಣೆ ಸಪ್ತಾಹದ ಕಾರ್ಯಕ್ರಮಗಳ ಮಾರ್ಗಸೂಚಿಗಳು ಇಂತಿವೆ.

ಜನವರಿ 12 ರಂದು ಸ್ವಾಮಿ ವಿವೇಕಾನಂದ್ರ ತತ್ವ ಆದರ್ಶಗಳನ್ನು ಯುವ ಜನತೆಯ ಮೇಲೆ ಸ್ಪೂರ್ತಿ ನೆಲೆಯಾಗುವಂತೆ ಮಾಡುವುದು, ಯುವ ಕಾರ್ಯಕ್ರಮಗಳ ಮೇಲೆ ಹಾಗೂ ಸ್ವಾಮಿ ವಿವೇಕಾನಂದ ವಿಚಾರಗಳ ಮೇಲೆ ಚರ್ಚೆ, ಕಾಲೇಜು ಮಟ್ಟ ಹಾಗೂ ಅಂತರ ಕಾಲೇಜು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಚರ್ಚಾ ಸ್ಪರ್ಧೆ. ಸ್ವಾಮಿ ವಿವೇಕಾನಂದರ ವಾಣಿಯನ್ನು ಜನರಿಗೆ ತಲುಪಿಸಲು ಒಂದೂವರೆ ಕಿಲೋ ಮೀಟರ್‌ನಿಂದ ಎರಡು ಕಿಲೋ ಮೀಟರ್‌ವರೆಗೆ ಜಾಥಾ ನಡೆಸುವುದು. ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿ ದಾನ ಮಾಡಿದ ದಾನಿಗಳ ವಿವರಗಳನ್ನು ಒಳಗೊಂಡ ಬೋರ್ಡ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾಕುವ ಮುಖಾಂತರ ಇತರರನ್ನು ಪ್ರೇರೇಪಿಸುವುದು.

ಜನವರಿ 13 ರಂದು ರಾಷ್ಟ್ರೀಯ ಹಾಗೂ ಸಾಮಾಜಿಕ ನೆಲೆವುಳ್ಳ ಸಾಕ್ಷರತೆ, ಸಮುದಾಯ, ಗೀತೆಗಳನ್ನು ಯುವಕರಿಂದ ಹಾಡಿಸುವುದು. ಸ್ಥಳೀಯ ಜಾನಪದ, ಸಂಸ್ಥೆಗಳ ಕಲಾವಿದರಿಂದ ಬೊಂಬೆ ಪ್ರದರ್ಶನ, ನಾಟಕದಲ್ಲಿ ಯುವಕರನ್ನು ತೊಡಗಿಸುವುದು. ಹಳ್ಳಿಗಾಡಿನ ವಿವಿಧ ಕಲೆ – ಕಸೂತಿಗಳ ಹಾಗೂ ವೃತಿಪರ ಕೌಶಲ್ಯಗಳನ್ನು ಅನಾವರಣಗೊಳಿಸುವುದು. ಸಾರ್ವಜನಿಕರಿಂದ ಅನುಪಯುಕ್ತ ಗೊಂಬೆಗಳನ್ನು ಸಂಗ್ರಹಿಸಿ ಅಂಗನವಾಡಿ/ಶಾಲೆಗಳಿಗೆ ನೀಡುವುದು ಮತ್ತು ಪುಸ್ತಕಗಳನ್ನು ಸಂಗ್ರಹಿಸಿ ಶಾಲೆ/ಲೈಬ್ರರಿಗಳಿಗೆ ನೀಡುವುದು.

ಜನವರಿ 14 ಮತ್ತು 15 ರಂದು "ಸಾರ್ವತ್ರಿಕ ಸಾಕ್ಷರತೆಯಲ್ಲಿ ಯುವಜನತೆಯ ಪಾತ್ರದ " ಕುರಿತು ಭಾಷಣ ಸ್ಪರ್ಧೆ, ಏರ್ಪಡಿಸುವುದು. ಮತ್ತು ರಾಷ್ಟ್ರೀಯ ಮಹತ್ವದ ವಿಷಯಗಳ ಕುರಿತು ಯುವಕರಿಂದ ಕೌಶಲ್ಯಗಳ ಪ್ರದರ್ಶನ.

ಜನವರಿ 16 ರಂದು ರಾಷ್ಟ್ರೀಯ ಸೇವಾ ದಿನವಾಗಿ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರನ್ನು ಒಳಗೊಂಡ ಪರಿಸರ ಸಂರಕ್ಷಣೆ ಕುರಿತದ ವಿಶೇಷ ಕಾರ್ಯಕ್ರಮ ಏರ್ಪಡಿಸುವುದು. ಹಳ್ಳಿ ಮತ್ತು ನಗರಗಳ ಸ್ವಚ್ಚತೆ ಕುರಿತಾಗಿ ಸ್ವಯಂ ಪ್ರೇರಣೆ ಮೇಲೆ ಶ್ರಮದಾನ ಹಾಗೂ ವಿಶೇಷ ಘಟಕ ಕಾರ್ಯಕ್ರಮ. ನೇತ್ರದಾನ, ರಕ್ತದಾನ ಕುರಿತಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳು , ನೀರಿನ ಕೊಳ, ರಸ್ತೆ ಕೆಲಸ ಕಾರ್ಯಗಳ ಸಂರಕ್ಷಣೆ ಬಗ್ಗೆ ಯುವಜನತೆಯನ್ನು ಬಳಸಿಕೊಳ್ಳುವ ಕಾರ್ಯಕ್ರಮ ಏರ್ಪಡಿಸುವುದು.

ಜನವರಿ 17 ರಂದು ದೈಹಿಕ ದೃಢತೆ ಅಂಗವಾಗಿ ಗ್ರಾಮೀಣ ಕ್ರೀಡೆ, ವಿಶೇಷ ಕ್ರೀಡೆಗೆ ಪ್ರೋತ್ಸಾಹ ನೀಡುವುದು. ಸಾಹಸ ಕ್ರೀಡೆಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

ಜನವರಿ 18 ರಂದು ಶಾಂತಿಗಾಗಿ ಯುವಜನತೆ ದಿನ ಆಚರಿಸಲು ದೇಶದಲ್ಲಿ ನೆಲೆಸಲು ಸಮಾವೇಶ ಹಾಗೂ ಚರ್ಚೆಗಳನ್ನು ಆಯೋಜಿಸುವುದು. ಕ್ರೀಡೆಗಳ ಆಯೋಜನೆ ಮಾಡುವುದು.

ಜನವರಿ 19 ರಂದು ಕೌಶಲ್ಯ ಅಭಿವೃದ್ಧಿ ನಿಮಿತ್ತ ಯುವಜನರು ತಯಾರಿಸಿದ ಕೌಶಲ್ಯ ಅಭಿವೃದ್ಧಿ ವಸ್ತುಗಳ ವಸ್ತು ಪ್ರದರ್ಶನ ಏರ್ಪಡಿಸುವುದು, ಹೊಸ ವಿಷಯಗಳ ತರಬೇತಿಯನ್ನು ಪ್ರಾರಂಭಿಸುವುದು, ಸರ್ಕಾರದ ಯುವ ಕಾರ್ಯಕ್ರಮಗಳ ವಿವರಗಳನ್ನು ಯುವಜನತೆಗೆ ತಲುಪಿಸುವುದು ಮತ್ತು ರಾಷ್ಟ್ರೀಯ ಯುವ ಸಪ್ತಾಹದ ಕ್ರೋಢಿಕರಣ ಮಾಡುವುದು.

ರಾಜ್ಯದ ಸರ್ಕಾರದ ಆದೇಶದಲ್ಲಿ ಮೇಲೆ ಕಾಣಿಸಿದ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳು, ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಜನವರಿ 12 ರಿಂದ 19 ರವರೆಗೆ "ರಾಷ್ಟ್ರೀಯ ಯುವ ದಿನಾಚರಣೆಯ ಸಪ್ತಾಹ" ವನ್ನಾಗಿ ಆಚರಿಸುವುದು.

ಮಾರ್ಗಸೂಚಿಗಳ ಅನುಸಾರ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಪ್ರತಿ ವರ್ಷ ತಪ್ಪದೇ ಕಡ್ಡಾಯವಾಗಿ ಆಚರಿಸಲು ಸರ್ಕಾರ ಆದೇಶ ಹೊರಡಿಸಿದೆ.

ಬಾಬು/ಕೆಎಂ

## ತರಬೇತಿ ಶಿಬಿರಗಳು

ಬೆಂಗಳೂರು, ಜನವರಿ 11, 2016 (ಕರ್ನಾಟಕ ವಾರ್ತೆ)

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖಾವತಿಯಿಂದ 2015-16 ನೇ ಸಾಲಿನ ವಿಶೇಷ ಘಟಕ/ಗಿರಿಜನ ಉಪ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವ ಜನರಿಗೆ ಜಲ ಸಾಹಸ ಮತ್ತು ಭೂ ಸಾಹಸಗಳ ಕಾರ್ಯಕ್ರಮಗಳಲ್ಲಿ ಬೇಸಿಕ್, ಅಡ್ವಾನ್ಸ್ ಹಾಗೂ ತರಬೇತುದಾರರು ತರಬೇತಿ ಶಿಬಿರಗಳನ್ನು ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ತಲಾ 10 ದಿನಗಳಿಂದ 21 ದಿನಗಳವರೆಗೆ ಏರ್ಪಡಿಸಲಾಗಿದೆ.

ಆಸಕ್ತರು ನೊಂದಾವಣೆಗಾಗಿ ದೂರವಾಣಿ ಸಂಖ್ಯೆ 080-22211246 ಅಥವಾ 9902951914 ಗೆ ಹೆಸರನ್ನು ನೊಂದಾಯಿಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ- ರಾಜೇಂದ್ರ – 9448038220, ಇವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಬಾಬು/ಕೆಎಂ

## ಹೈನುಗಾರಿಕೆ ಹಾಗೂ ಮೇವು ಉತ್ಪಾದನೆ ತರಬೇತಿ

ಬೆಂಗಳೂರು, ಜನವರಿ 11, 2016 (ಕರ್ನಾಟಕ ವಾರ್ತೆ)

ರಾಜ್ಯ ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ (ಇಂಡೋ-ಡ್ಯಾನಿಷ್ ಫಾರಂ) ಹೆಸರಘಟ್ಟ, ಬೆಂಗಳೂರು ಇಲ್ಲಿ 18-1-2016 ರಿಂದ 23-1-2016 ರವರೆಗೆ ಹೈನುಗಾರಿಕೆ ಪ್ರಾರಂಭಿಸಲು ಆಸಕ್ತಿಯುಳ್ಳ ರೈತರಿಗೆ, ರೈತ ಮಕ್ಕಳಿಗೆ ಹಾಗೂ ರೈತ ಮಹಿಳೆಯರಿಗೆ 6 ದಿನಗಳ ಹೈನುಗಾರಿಕೆ ಹಾಗೂ ಮೇವು ಉತ್ಪಾದನೆ ಬಗ್ಗೆ ತರಬೇತಿ ಏರ್ಪಡಿಸಲಾಗಿದೆ. ತರಬೇತಿಗೆ ಹಾಜರಾಗುವಾಗ ಅಭ್ಯರ್ಥಿಗಳು ವಾಸಸ್ಥಳದ ಧೃಢೀಕರಣ ಪತ್ರ ಹಾಗೂ 2 ಪಾಸ್‌ಪೋರ್ಟ್ ಸೈಜಿನ ಫೋಟೊ ಹಾಗೂ ಗುರುತಿನ ಚೀಟಯನ್ನು ತರಬೇಕು. ಹೆಚ್ಚಿನ ಮಾಹಿತಿಗೆ 080- 28466397 ನ್ನು ಸಂಪರ್ಕಿಸಬಹುದಾಗಿದೆ.

ಬಾಬು/ಕೆಎಂ